ಕಲಿಕೆಯ ಸಾಧನವಾಗಿ ನಿಯತಕಾಲಿಕೆಗಳು

ವಿನತಾ ವಿಶ್ವನಾಥನ್ ಮತ್ತು ರುಚಿ ಶೇವಡೆ

ಮಕ್ಕಳ ಪತ್ರಿಕೆಗಳ ಸಂಕ್ಷಿಪ್ತ ಇತಿಹಾಸ

18ನೆಯ ಶತಮಾನದಷ್ಟು ಹಿಂದೆಯೇ ಮಕ್ಕಳನ್ನು ತನ್ನ ಓದುಗರನ್ನಾಗಿ ದೃಷ್ಟಿಯಲ್ಲಿಟ್ಟುಕೊಂಡು ಕೆಲವು ನಿಯತಕಾಲಿಕೆಗಳು ಆರಂಭವಾದದ್ದನ್ನು ಕಾಣಬಹುದು. ಈ ಪತ್ರಿಕೆಗಳು ಬಹುತೇಕವಾಗಿ ಯುರೋಪ್ ಮತ್ತು ಉತ್ತರ ಅಮೆರಿಕಾದಿಂದ ಪ್ರಕಟವಾಗುತ್ತಿದ್ದವು. ನೀತಿಪಾಠಗಳು ಮತ್ತು 'ಉತ್ತಮ' ಬದುಕನ್ನು ಹೇಗೆ ಜೀವಿಸಬೇಕು ಎನ್ನುವುದರ ಕುರಿತಾದ ಬೋಧನೆಯ ವಿಚಾರಗಳನ್ನು ಒಳಗೊಂಡಿದ್ದವು. 19ನೆಯ ಶತಮಾನದಲ್ಲಿ ಪತ್ರಿಕೆಗಳ ವಸ್ತುವಿಷಯಗಳ ಸ್ವರೂಪವು ಕಥೆ, ಜಾನಪದ ಮತ್ತು ಕಾಲ್ಪನಿಕ ಕಥೆಗಳಿಗೆ ಬದಲಾಯಿತು. 20ನೆಯ ಶತಮಾನದ ಆರಂಭದಲ್ಲಿ ಆಧುನಿಕ ಯುಗದ ಮಕ್ಕಳ ಪತ್ರಿಕೆಗಳು ಹಾಗೂ ಕಾಮಿಕ್ಸ್‌ಗಳು ಆರಂಭವಾದವು. ಸಮಾಜದಲ್ಲಿ ಮಕ್ಕಳ ಬಾಲ್ಯದ ಬಗೆಗಿದ್ದ ನಂಬಿಕೆ ಹಾಗೂ ಈ ಕ್ಷೇತ್ರದಲ್ಲಿದ್ದ ಸಂಭಾವ್ಯ ಲಾಭವನ್ನು ಅನುಸರಿಸಿ, ಮಕ್ಕಳ ನಿಯತಕಾಲಿಕೆಗಳು ವಿಕಾಸಗೊಂಡವು. ಭಾರತದಲ್ಲಿ 20ನೆಯ ಶತಮಾನದ ಮೊದಲಾರ್ಧದಲ್ಲಿ ಮಕ್ಕಳ ಪತ್ರಿಕೆಗಳು ಪ್ರಕಟವಾಗ-ತೊಡಗಿದವು. ಆನಂದ (ಮರಾಠಿ), ಸಂದೇಶ (ಬಂಗಾಳ), ಬಲರಾಮ (ಮಲಯಾಳಂ), ಚಂದಮಾಮ (ತೆಲುಗು ಮತ್ತು ತಮಿಳು) ಇವು ಆರಂಭದಲ್ಲಿ ಪ್ರಕಟವಾದ ಮಕ್ಕಳ ನಿಯತ-ಕಾಲಿಕೆಗಳು. 1970ರ ದಶಕದ ನಂತರ ಮಕ್ಕಳಿಗಾಗಿ ಪ್ರಕಟಗೊಳ್ಳುತ್ತಿದ್ದ ನಿಯತಕಾಲಿಕೆಗಳ ಹೆಜ್ಜೆಯು ಭಾರತದಲ್ಲಿ ದೃಢವಾಯಿತು.

ಭಾಷಾಕಲಿಕೆಯನ್ನು ಬೆಂಬಲಿಸುವ ಮುದ್ರಣ-ಸಮೃದ್ಧ ವಾತಾವರಣವನ್ನು ಒದಗಿಸುವ ಕುರಿತಾದ ಮಾತುಕತೆಗಳಲ್ಲಿ ಅಥವಾ ಶೈಕ್ಷಣಿಕ ವಲಯಗಳಲ್ಲಿ ನಡೆದ ಕಲಿಕೆಯ ಸಂಪನ್ಮೂಲಗಳನ್ನು ಕುರಿತಾದ ಚರ್ಚೆಗಳಲ್ಲಿ ಪತ್ರಿಕೆಗಳನ್ನು ಶಿಕ್ಷಣದ ಅತಿಮುಖ್ಯ ಸಾಧನ/ಉಪಕರಣಗಳೆಂದೇ ಉಲ್ಲೇಖಿಸಲಾಗಿದೆ. ಪತ್ರಿಕೆಗಳು ಮಾತ್ರವಲ್ಲ, ಕಾಮಿಕ್ಸ್‌ಗಳನ್ನು ಕೂಡ ತರಗತಿ-ಕೊಠಡಿಯಲ್ಲಿ ಪ್ರಬಲವಾದ ಕಲಿಕೆಯ ಸಾಧನವನ್ನಾಗಿ ಬಳಸಬಹುದು ಎಂಬ ವಿಚಾರವನ್ನು ಜಗತ್ತಿನೆಲ್ಲೆಡೆಯ ಶಿಕ್ಷಕರ ಅನುಭವಗಳು ಪುಷ್ಟೀಕರಿಸುತ್ತವೆ. ಹಾಗಿದ್ದರೂ ಈ ವಿಚಾರಕ್ಕೆ ಸಿಕ್ಕ ಬಹುಮಟ್ಟಿನ ಬೆಂಬಲವು ಅನೌಪಚಾರಿಕವಾಗಿದೆಯಲ್ಲದೆ, ಮಕ್ಕಳ ಪತ್ರಿಕೆಗಳು, ಅವುಗಳ ಉಪಯುಕ್ತತೆ ಹಾಗೂ ಪ್ರಭಾವಗಳನ್ನು ಕುರಿತು ವ್ಯವಸ್ಥಿತವಾಗಿ ಹೆಚ್ಚಿನ ಅಧ್ಯಯನಗಳು ನಡೆದಿಲ್ಲ. ಕಲಿಕೆಯ ಸಾಧನಗಳೆಂದು ಮುಖ್ಯವಾಗಿ ಗುರುತಿಸಲ್ಪಟ್ಟಿದ್ದರೂ ಪತ್ರಿಕೆಗಳು ತರಗತಿ ಕೊಠಡಿಯಯಲ್ಲಿ ಕಡಿಮೆ ಬಳಸಲ್ಪಡುವ ಪೂರಕ ಕಲಿಕಾ ಸಾಧನಗಳಾಗಿವೆ.

ತರಗತಿ ಕೊಠಡಿಯ ಕಲಿಕಾ ಪ್ರಕ್ರಿಯೆಯಲ್ಲಿ ಮಕ್ಕಳ ಪತ್ರಿಕೆಗಳು ಹೇಗೆ ಪಾತ್ರ ವಹಿಸಬಲ್ಲವು ಎಂಬ ವಿಷಯದ ಕುರಿತು ನಡೆಸಲಾದ ಸಾಹಿತ್ಯಿಕ ಸಮೀಕ್ಷೆಯೊಂದರಲ್ಲಿ ಸಂಗ್ರಹಿಸಿದ ವಿಚಾರಗಳನ್ನು ಈ ಲೇಖನದಲ್ಲಿ ನಾವು ಚರ್ಚಿಸುತ್ತಿದ್ದೇವೆ. ಹಲವಾರು ಶಿಕ್ಷಕರು ನೀಡಿದ ಮೆಚ್ಚುಗೆಯ ನುಡಿಗಳನ್ನು ನಮ್ಮ ಚರ್ಚೆಯು ಮುಖ್ಯವಾಗಿ ಆಧರಿಸುತ್ತದೆ. ಮಾಧ್ಯಮಿಕ ಶಾಲಾ ಮಕ್ಕಳನ್ನು ಗುರಿಯಾಗಿಟ್ಟು-ಕೊಂಡು ಹೊರಬರುತ್ತಿರುವ **ಚಕ್‌ಮಕ್** ಎಂಬ ವಿಜ್ಞಾನ ವಿಷಯಗಳ ಮೇಲಿನ ಪತ್ರಿಕೆಯನ್ನು ಪೂರಕ ಓದಿನ ಸಾಮಗ್ರಿಯಾಗಿ ಹೇಗೆ ಬಳಸಿಕೊಳ್ಳಲಾಯಿತು ಎಂಬುದರ ಕುರಿತೂ ನಾವು ಮಾತನಾಡಲಿದ್ದೇವೆ.

ತರಗತಿ ಕೊಠಡಿಗಳಲ್ಲಿ ನಿಯತಕಾಲಿಕೆಗಳನ್ನು ಏಕೆ ಬಳಸಬೇಕು?

ಪತ್ರಿಕೆಯೊಂದರ ಮೇಲೆ ಕಣ್ಣು ಹಾಯಿಸುತ್ತ ಹೋದಂತೆ ಅದು ತನ್ನಲ್ಲಿರುವ ಪಠ್ಯ, ಚಿತ್ರಗಳು ಹಾಗೂ ಪ್ರತಿಯೊಂದು ಬರಹದ ವಿನ್ಯಾಸದಲ್ಲಿ ಪ್ರತಿಬಿಂಬಿತವಾಗಿರುವ ವಿಷಯವಸ್ತುಗಳಲ್ಲಿನ ಸಮೃದ್ಧತೆ ಹಾಗೂ ವೈವಿಧ್ಯದ ಮೇಲ್ನೋಟವನ್ನು ನೀಡುತ್ತದೆ. ಸಣ್ಣ ಕಥೆಗಳು, ಕವಿತೆಗಳು, ಹಾಸ್ಯ ತುಣುಕುಗಳು ಹಾಗೂ ಸುದ್ದಿ ತುಣುಕುಗಳು, ಅದ್ಭುತ ಸಂಗತಿಗಳು, ಬಗೆಬಗೆಯ ಒಗಟುಗಳು, ಲೇಖನಗಳು, ಚಟುವಟಿಕೆ ಮತ್ತು ಸ್ಪರ್ಧೆಗಳು-ಹೀಗೆ ಮಕ್ಕಳ ನಿಯತಕಾಲಿಕೆಗಳಲ್ಲಿ ಕಥಾ ಸಾಹಿತ್ಯ ಮತ್ತು ವಾಸ್ತವಿಕ ಸಂಗತಿಗಳನ್ನು ಆಧರಿಸಿ ರಚಿಸಿದ ಬರಹಗಳ ಭಂಡಾರವೇ ಇದೆ. ವಿಭಿನ್ನ ಓದು ಮತ್ತು ಗ್ರಹಿಕೆಯ ಮಟ್ಟಗಳಿಗೆ ಬೇಕಾದದ್ದೂ ಅದರಲ್ಲಿದೆ. ಪತ್ರಿಕೆಗಳು ನಿಯಮಿತವಾಗಿ ಪ್ರಕಟವಾಗುವುದರಿಂದ ಮತ್ತು ಬಹುತೇಕವಾಗಿ ಅವು ಕಿರು ಅಂತರದಲ್ಲಿಯೇ ಪ್ರಕಟವಾಗುವುದರಿಂದ ಅಲ್ಲಿರುವ ಮಾಹಿತಿಗಳೂ ಪ್ರಸಕ್ತ ಹಾಗೂ ಪ್ರಸ್ತುತವಾಗಿರುತ್ತವೆ. ಇಲ್ಲಿರುವ ವಸ್ತುಗಳುದ್ದಕ್ಕೂ ಕಾಣುವ ಸಾಮಾನ್ಯ ಅಂಶವೆಂದರೆ, ಅವುಗಳ ಸಂಕ್ಷಿಪ್ತತೆ. ಪತ್ರಿಕೆಗಳ ಬರಹಗಳು ಚಿಕ್ಕದಾಗಿದ್ದು ಮಾಹಿತಿಗಳ ತುಣುಕುಗಳು ಸುಲಭಗ್ರಾಹ್ಯವಾಗಿರುತ್ತವೆ. ಪತ್ರಿಕೆಯನ್ನು ನೀವು ಸಂಪೂರ್ಣವಾಗಿ ಓದಬೇಕಾಗಿಲ್ಲ, ನಿಮಗೆ ಆಸಕ್ತಿಕರವಾದ ಭಾಗಗಳನ್ನಷ್ಟೇ ಓದಬಹುದು ಎನ್ನುವುದು ಈ ಪತ್ರಿಕೆಗಳಲ್ಲಿ ಗುರುತಿಸಬಹುದಾದ ಅತ್ಯುತ್ತಮ ಗುಣ.

ಕೆಲವು ಪತ್ರಿಕೆಗಳು ವಿಜ್ಞಾನ, ಪರಿಸರದಂತಹ ಒಂದೇ ಒಂದು ವಸ್ತುವಿಷಯದ ಮೇಲೆ **ವ್ಯಾಪಕರೂಪದಲ್ಲಿ ಕೇಂದ್ರೀಕೃತವಾಗಿರುತ್ತವೆ. ಉದಾಹರಣೆಗೆ, ಬ್ರೇನ್‌ವೇವ್ ಮತ್ತು ನ್ಯಾಷನಲ್ ಜಿಯಾಗ್ರಫಿಕ್ ಕಿಡ್ಸ್. ಚಕ್‌ಮಕ್, ಕಿಶೋರ್ ಮತ್ತು ಚಂಪಕ್**‌ನಂತಹ ಇನ್ನು ಕೆಲವು ಪತ್ರಿಕೆಗಳು ತಮ್ಮ ಓದುಗರಿಗೆ ವೈವಿಧ್ಯಮಯ ವಸ್ತುವಿಷಯಗಳನ್ನು ಒದಗಿಸುತ್ತವೆ. ಯಾವುದೇ ರೀತಿಯಲ್ಲಾದರೂ ಸರಿ, ಅವು ಮೇಲೆ ಉಲ್ಲೇಖಿಸಿದ ಕಾರಣಗಳಿಂದಾಗಿ ಮಕ್ಕಳಿಗೆ ಆಕರ್ಷಕವಾಗಿ ತೋರುತ್ತವೆ ಹಾಗೂ ಮಕ್ಕಳು ಅವುಗಳ ಓದಿನಲ್ಲಿ ತೊಡಗಿ-ಕೊಳ್ಳುತ್ತಾರೆ. ಇದೇ ಕಾರಣಗಳಿಂದಾಗಿಯೇ ಶಿಕ್ಷಕರಿಗೆ ಅವು ತರಗತಿ ಕೊಠಡಿಯಲ್ಲಿ ಪೂರಕ ಸಾಮಗ್ರಿಗಳಾಗಿ ಆಕರ್ಷಕವೆನಿಸುತ್ತವೆ. ಅವುಗಳಿಗೆ ಹೊಂದುವಂತೆ ಒಂದೋ ಅಥವಾ ಅದಕ್ಕಿಂತಲೂ ಹೆಚ್ಚೋ ಪಾಠದ ಅವಧಿಗಳನ್ನು ಕೂಡ ಅವರು ಯೋಜಿಸಿ-ಕೊಳ್ಳಬಹುದು.

ಮಕ್ಕಳ ಪತ್ರಿಕೆಗಳು ಮತ್ತು ಓದು ಬರಹದ ಕಲಿಕೆ:
ಈ ಪತ್ರಿಕೆಗಳು ಕಥೆ ಮತ್ತು ಕವಿತೆಗಳಿಂದ ಸಮೃದ್ಧವಾಗಿರು-ವುದರಿಂದ ಒಂದು ಭಾಷಾ ತರಗತಿಯಲ್ಲಿ ಅವುಗಳನ್ನು ಯಾವಾಗಲೂ ಅವಲಂಬಿಸಬಹುದು. ಅವುಗಳ ಗಾತ್ರ, ಸಂಕೀರ್ಣತೆಯ ಮಟ್ಟ, ವಿಷಯ ಮತ್ತು ಪ್ರಕಾರಗಳನ್ನು ಆಧರಿಸಿ, ಕಥೆ ಮತ್ತು ಬರಹಗಳನ್ನು ದೊಡ್ಡದಾಗಿ ವಾಚಿಸಲು, ಕಥೆ ಹೇಳಲು, ಅವಲೋಕಿಸಲು ಹಾಗೂ ಸಾಹಿತ್ಯಿಕ ಚರ್ಚೆಗಳಿಗೆ ಬಳಸಿಕೊಳ್ಳ-ಬಹುದು. ವಿವಿಧ ವಯೋಮಾನದ ಮಕ್ಕಳಿಗೆ ರಂಗಚಟುವಟಿಕೆ-ಗಳಲ್ಲಿಯೂ ಅವನ್ನು ಬಳಸಿಕೊಳ್ಳಬಹುದು.

ಓದು ಎನ್ನುವುದು ಕವಿತೆ ಮತ್ತು ಶಿಶುಗೀತೆಗಳ ಮೂಲಕವೂ ರೂಢಿಸಿಕೊಳ್ಳಬಹುದಾದ ಒಂದು ಕೌಶಲ್ಯವಾಗಿರುವುದರಿಂದ ಅದರಲ್ಲಿ ಅಮೂರ್ತ ಪರಿಣಾಮಗಳೂ ಇರುತ್ತವೆ. ಅನೇಕ ಮಕ್ಕಳು ಕವಿತೆ ಮತ್ತು ಶಿಶುಗೀತೆಗಳ ಸ್ವರೂಪದಿಂದಾಗಿಯೇ ಅವುಗಳನ್ನು ಇಷ್ಟಪಡುತ್ತಾರೆ. ಪ್ರೊ.ಕೃಷ್ಣಕುಮಾರ್ ಅವರು ಹೇಳಿದಂತೆ ಅವು, 'ಅತ್ಯಂತ ಸೃಜನಶೀಲ ಹಾಗೂ ಭಾಷೆಯ ಚೈತನ್ಯಪೂರ್ಣ ರೂಪಗಳ ಸಂಪನ್ಮೂಲವಾಗಿದೆ.' ಕವಿತೆಗಳು ಮಗುವಿಗೆ ಭಾಷೆಯೊಡನೆ ಆಟವಾಡಲು ಅನುವು ಮಾಡಿಕೊಡುತ್ತವೆ. ಸಾಂಪ್ರದಾಯಿಕ ಶಿಶುಗೀತೆ ಪುಸ್ತಕಗಳು ಅಥವಾ ಪಠ್ಯಪುಸ್ತಕಗಳ ಭಾಗವಾಗಿರದ ವೈವಿಧ್ಯಮಯ ಕವಿತೆಗಳನ್ನು ಪತ್ರಿಕೆಗಳು ಮಕ್ಕಳಿಗೆ ನೀಡುತ್ತವೆ. ಉದಾಹರಣೆಗೆ, **ಚಕ್‌ಮಕ್‌ನಲ್ಲಿ** ನಾವು ಕೇವಲ ಹಿಂದಿ ಕವಿತೆಗಳನ್ನಷ್ಟೇ ಅಲ್ಲದೆ ವಿದೇಶಗಳ ಹಾಗೂ ಇಂಗ್ಲಿಷ್ ಮತ್ತು ಇರಾನಿಯನ್ ಭಾಷೆಗಳಿಂದ ಅನುವಾದಗೊಂಡ ಹಲವಾರು ಕವಿತೆಗಳನ್ನೂ ಪ್ರಕಟಿಸುತ್ತೇವೆ. ಮಕ್ಕಳ ಪತ್ರಿಕೆಗಳಲ್ಲಿ ಪ್ರಕಟವಾದ ಕೆಲವೊಂದು ರಚನೆಗಳು ಈ ಮಾತನ್ನು ದೃಢಪಡಿಸಿದ್ದು, ಅವುಗಳನ್ನು ಯಾವಾಗ, ಎಷ್ಟೇ ಬಾರಿ ಪಠಿಸಲಿ, ಮಕ್ಕಳು ಅವುಗಳಿಗೆ ಮತ್ತೆ ಮತ್ತೆ ಅದೇ ತುಂಬು ಉತ್ಸಾಹದಿಂದ ಸ್ಪಂದಿಸುತ್ತಾರೆ ಎನ್ನುವುದು ಕಂಡುಬಂದಿದೆ. **ಚಕ್‌ಮಕ್‌ನ** ಮೊದಲನೆಯ ಸಂಚಿಕೆಯಲ್ಲಿ ರಾಜೀವ ಉತ್ಸಾಹಿಯವರ, **ಆಲೂ ಮಿರ್ಚಿ ಚಾಯ್ ಜೀ** ಎಂಬ ಕವಿತೆ ಪ್ರಕಟವಾಗಿತ್ತು. ಮೇಲೆ ಹೇಳಿದ ರೀತಿಯಲ್ಲಿ ಅತ್ಯಂತ ಜನಪ್ರಿಯತೆಯನ್ನು ಪಡೆದ ಕವಿತೆಗಳಲ್ಲಿ ಇದೂ ಒಂದು. ಈ ಕವಿತೆಯು ಕಳೆದ ಹಲವಾರು ದಶಕಗಳಿಂದ ಸರ್ಕಾರವು ನಿಗದಿಪಡಿಸಿದ ಹಾಗೂ ಖಾಸಗೀ ಪಠ್ಯಪುಸ್ತಕಗಳೆರಡಲ್ಲಿಯೂ ಸ್ಥಾನ ಪಡೆದುಕೊಳ್ಳುತ್ತಲೇ ಇದೆ.

ಮನೋರಂಜನೆಯ ಓದಿಗೆಂದು ಕೈಗೆತ್ತಿಕೊಂಡರೆ ಈ ಪತ್ರಿಕೆಗಳು ಪಠ್ಯಪುಸ್ತಕಗಳ ಓದು ಉಂಟುಮಾಡುವ ಬಳಲುವಿಕೆಯಿಂದ ನಿರಾಳತೆಯನ್ನು ಉಂಟುಮಾಡುತ್ತವೆ. ತರಗತಿ ಕೊಠಡಿಗಳಲ್ಲಿ ಪತ್ರಿಕೆಗಳು ಕೈಗೆಟಕುವಂತೆ ಇರಲು ಬಿಟ್ಟರೆ ಬಹುಶಃ ಓದಲು ಏನೇನೂ ಮನಸ್ಸೇ ಇರದ ಮಕ್ಕಳೂ ಕೂಡ ಅವುಗಳ ಆಕರ್ಷಕ ಮುಖಪುಟ, ಹೊರಾವರಣ ಹಾಗೂ ವೈವಿಧ್ಯಮಯ ವಸ್ತುವಿಷಯಗಳ ಕಾರಣ, ಅವುಗಳನ್ನು ಕೈಗೆತ್ತಿಕೊಳ್ಳಲು ಹಾಗೂ ಓದುವ ಅಭ್ಯಾಸವನ್ನು ರೂಢಿಸಿಕೊಳ್ಳಲು ನೆರವಾಗುತ್ತದೆ ಎಂಬುದನ್ನು ಶಿಕ್ಷಕರು ಕಂಡುಕೊಂಡಿದ್ದಾರೆ. ಇದು ಪೂರ್ವ ಪ್ರಾಥಮಿಕ ಮಟ್ಟದಲ್ಲಿಯೂ ನಿಜ. ಮುದ್ರಿತ ವಸ್ತುವಿಷಯಗಳ ಬಗ್ಗೆ ಆಸಕ್ತಿ ಮೂಡಿಸಲು ಇದು ಮೊದಲ ಹೆಜ್ಜೆ. ಹಲವಾರು ಮಕ್ಕಳು ಅದರಲ್ಲಿಯೂ ವಿಶೇಷವಾಗಿ ಆರಂಭಿಕ ತರಗತಿಗಳಲ್ಲಿರುವ ಮಕ್ಕಳು ಅನೇಕ ಕಾರಣಗಳಿಂದಾಗಿ ಪುಸ್ತಕಗಳನ್ನು ಕಂಡರೆ ಭಯಪಡುತ್ತಾರೆ. ಅವರಲ್ಲಿ ಕೆಲವರಂತೂ ಪುಸ್ತಕಗಳು, ಪಠ್ಯಪುಸ್ತಕಗಳು ಅಥವಾ ಇಂತಹುದೇ ಇನ್ನಿತರ ವಿಚಾರಗಳ ಹೆಚ್ಚಿನ ಸಂಪರ್ಕಕ್ಕೆ ಬಂದಿರುವುದಿಲ್ಲ. ಇತರ ಕೆಲವರು ತಮ್ಮ ಸಹಪಾಠಿಗಳು ಸುಲಭವಾಗಿ ಓದುವುದನ್ನು ನೋಡುತ್ತಾರೆ. ಆದರೆ ಅವರಿಗೆ ತಾವು ಸ್ವತಃ ಅಂತಹ ಕೌಶಲ್ಯವನ್ನು ಹೊಂದಬಲ್ಲೆವು ಎನ್ನುವುದರ ಬಗ್ಗೆ ಖಚಿತತೆ ಇರುವುದಿಲ್ಲ. ಒಂದೊಮ್ಮೆ ಈ ಮಕ್ಕಳು ಪತ್ರಿಕೆಗಳನ್ನು ಕೈಗೆತ್ತಿಕೊಂಡರೆ, ಮುದ್ರಿತ ವಸ್ತುಗಳು ಅಷ್ಟೊಂದು ಬೆದರಿಸುವುದಿಲ್ಲ ಎಂದು ಅವರಿಗೆ ಅರಿವಾಗುತ್ತದೆ. ಮಕ್ಕಳಿಗೆ ಈ ಪ್ರೇರಣೆಯನ್ನು ಆದಷ್ಟು ಬೇಗ ನೀಡಿದರೆ, ಅವರು ಒಳ್ಳೆಯ ಓದುಗರಾಗಿ ಬೆಳೆಯುತ್ತಾರೆ ಎಂಬುದನ್ನು ಕೆಲವು ಶಿಕ್ಷಕರು ಕಂಡುಕೊಂಡಿದ್ದಾರೆ.

ಪತ್ರಿಕೆಗಳು ಮಕ್ಕಳನ್ನು ಬರೆಯುವಂತೆಯೂ ಪ್ರೇರೇಪಿಸುತ್ತವೆ. ಮಕ್ಕಳು ಪತ್ರಿಕೆಗಳಲ್ಲಿ ಓದುವ ಕಥೆ ಮತ್ತು ಇತರ ಬರಹಗಳು ಅವರಿಗೆ ಬರೆಯಲು ಬೇಕಾದ ಆಲೋಚನೆ ವಿಚಾರಗಳನ್ನು ನೀಡುತ್ತವೆ ಎಂಬುವುದು ಶಿಕ್ಷಕರ ಅನುಭವಕ್ಕೆ ಬಂದಿದೆ. ಪತ್ರಿಕೆಗಳಲ್ಲಿನ ತುಣುಕುಗಳನ್ನು ಅವರು ತಮ್ಮ ಬರವಣಿಗೆಗೆ ಮಾದರಿಯಾಗಿಯೂ ಬಳಸುವುದಿದೆ. ಪತ್ರಿಕೆಗಳು ಆಗಾಗ ಸಂಪಾದಕರಿಗೆ ಪತ್ರ ಬರೆಯುವಂತೆ, ಸಮಸ್ಯೆ-ಒಗಟುಗಳಿಗೆ ತಮ್ಮ ಉತ್ತರವನ್ನು ಬರೆದು ಕಳುಹಿಸುವಂತೆ ಹಾಗೂ ಬಹುಮಾನಗಳಿಗಾಗಿ ಸ್ಪರ್ಧಿಸುವಂತೆ ಓದುಗರನ್ನು ಉತ್ತೇಜಿಸುತ್ತವೆ.

ಪೂರಕ ಸಾಧನವಾಗಿ ಚಕ್‌ಮಕ್ :
'ಚಕ್‌ಮಕ್' ಎನ್ನುವುದು ಏಕಲವ್ಯ ಫೌಂಡೇಷನ್‌ನ ಪರಿಕಲ್ಪನೆ. 1980ರ ದಶಕದಲ್ಲಿ ಏಕಲವ್ಯ ಫೌಂಡೇಶನ್, ಮಾಧ್ಯಮಿಕ ಶಾಲಾ ಮಕ್ಕಳಿಗೆ ಪೂರಕ ಓದಿನ ಸಾಮಗ್ರಿಯಾಗಿ 'ಚಕ್‌ಮಕ್' ವಿಜ್ಞಾನ ಪತ್ರಿಕೆಯನ್ನು ಆರಂಭಿಸಿತು. ಮಧ್ಯಪ್ರದೇಶದ ಹೋಶಂಗಾ-ಬಾದ್‌ನಲ್ಲಿ ಏಕಲವ್ಯ ಫೌಂಡೇಶನ್‌ನ ವಿಜ್ಞಾನ ಬೋಧನಾ ಕಾರ್ಯಕ್ರಮವನ್ನು (HSTP –Hoshangabad Science Teaching Programme) ನಡೆಸುತ್ತಿದ್ದವರ ಅನುಭವದಿಂದಾಗಿ ಇಂತಹ ಪತ್ರಿಕೆಯ ಅಗತ್ಯವು ಕಂಡುಬಂದಿತು. ಆರಂಭದ ಆ ವರ್ಷಗಳಲ್ಲಿ ಚಕ್‌ಮಕ್‌ನ್ನು HSTP ಯ ಹಲವಾರು ಸರ್ಕಾರೀ ಗ್ರಾಮೀಣ ಶಾಲೆಗಳಲ್ಲಿ ಕಡಿಮೆ ಬೆಲೆಗೆ ಮಾರಲಾಗುತ್ತಿತ್ತು. ಮಕ್ಕಳು ಪತ್ರಿಕೆಯನ್ನು ಓದಲು ತುಂಬಾ ಇಷ್ಟಪಡುತ್ತಿದ್ದರು. ಪತ್ರಿಕೆ-ಆರಂಭವಾದಾಗಿನಿಂದ ಪತ್ರಿಕೆಯು **ಮೇರಾ ಪನ್ನಾ** (ನನ್ನ ಪುಟಗಳು) ಎಂಬ ಹೆಸರಿನಲ್ಲಿ ಹಲವಾರು ಪುಟಗಳನ್ನು ಮಕ್ಕಳ ಕೊಡುಗೆಗೆಂದೇ ಮೀಸಲಾಗಿಟ್ಟದ್ದರಿಂದ ಮಕ್ಕಳು ಪ್ರಶ್ನೆ, ಕವಿತೆ, ಕಥೆ, ಚಿತ್ರಕಲೆ ಹಾಗೂ ದೃಷ್ಟಾಂತಗಳನ್ನು ಅದಕ್ಕೆ ಕಳುಹಿಸುತ್ತಿದ್ದರು. ಮಕ್ಕಳ ದಿನಾಚರಣೆಯ ಅಂಗವಾಗಿ ಪತ್ರಿಕೆಯು ಹೊರತರುತ್ತಿದ್ದ ನವೆಂಬರ್ ಸಂಚಿಕೆಯು ಹಲವಾರು ವರುಷಗಳವರೆಗೆ ಸಂಪೂರ್ಣ **ಮೇರಾ ಪನ್ನಾ** ಸಂಚಿಕೆಗಳೇ ಆಗಿರುತ್ತಿದ್ದವು.

ಈ ರೀತಿಯಾಗಿ **'ಚಕ್‌ಮಕ್'** ನಿಯತಕಾಲಿಕೆಯು ಮಕ್ಕಳ ಬರವಣಿಗೆಯನ್ನು ಮತ್ತು ಅವರ ಕುತೂಹಲವನ್ನು ಪ್ರೋತ್ಸಾಹಿಸಿತು. ಇದಕ್ಕಾಗಿ ಅವರು 'ಒಳ್ಳೆಯ' ಕಲೆ ಅಥವಾ 'ಸಮರ್ಪಕ' ಬರವಣಿಗೆ ಎಂಬ ಸಾಂಪ್ರದಾಯಿಕ, ಪ್ರಮಾಣಿತ ಮಾನದಂಡಗಳನ್ನು ಬಿಟ್ಟು ತಮ್ಮನ್ನು ತಾವು ಕಾಗದದಲ್ಲಿ ಅಭಿವ್ಯಕ್ತಿಗೊಳಿಸಿಕೊಳ್ಳಲು ನೆರವಾಯಿತು. **'ಚಕ್‌ಮಕ್'**ನಲ್ಲಿ ಅವಕಾಶ ದೊರಕಿಸಿಕೊಳ್ಳಲು ಒಂದು ಮಗುವಿಗೆ ಅದರ ಸೃಜನಶೀಲತೆ ಹಾಗೂ ಆಲೋಚನೆಗಳೇ ಮಾನದಂಡಗಳಾಗಿದ್ದವು. ಅಲ್ಲಿ ಒಪ್ಪಿಗೆಯಾಗಲು/ಸ್ವೀಕೃತಿ ಪಡೆಯಲು 'ಏಕೈಕ' ಹಿಂದಿಯೆನ್ನುವುದೇನೂ ಇರಲಿಲ್ಲ. ಭಾಷಾ ವೈವಿಧ್ಯ ಹಾಗೂ ಶೈಲಿಗಳನ್ನು ಯಾವ ರೀತಿಯಲ್ಲಿಯೂ ಹಾಳುಮಾಡುತ್ತಿರಲಿಲ್ಲ. ಆ ಮಕ್ಕಳಲ್ಲಿ ಅನೇಕರು ಮೊದಲ ಪೀಳಿಗೆಯ ವಿದ್ಯಾರ್ಥಿಗಳಾಗಿದ್ದುದರಿಂದ ಈ ಶಾಲೆಗಳಲ್ಲಿ ಮಕ್ಕಳ ಆತ್ಮವಿಶ್ವಾಸದ ಮೇಲೆ ಇದು ಎಂತಹ ಪರಿಣಾಮವನ್ನು ಬೀರಿರಬಹುದು ಎಂಬುದನ್ನು ಕೇವಲ ಊಹಿಸಬಹುದು.

ಹೆಚ್ಚಿನ ಬಾರಿ ಮಕ್ಕಳು ಪತ್ರಿಕೆಯಲ್ಲಿ ಎಲ್ಲಕ್ಕಿಂತ ಮೊದಲು ಓದುವುದು **ಮೇರಾ ಪನ್ನಾ** ಪುಟಗಳೇ ಆಗಿರುತ್ತವೆ. ಅದರಲ್ಲಿನ ಬರಹಗಳು ಮಕ್ಕಳ ದೈನಂದಿನ ಜೀವನದ ಸುತ್ತಲೂ ಸುತ್ತುವ ಅನೇಕಾನೇಕ ವೈವಿಧ್ಯಮಯ ಸಂಗತಿಗಳ ಕುರಿತಾಗಿಯೇ ಇರುತ್ತವೆ ಹಾಗೂ ಹಿಂದೀ ಭಾಷೆಯ ವಿಭಿನ್ನ ಸ್ವರೂಪಗಳಲ್ಲಿಯೂ ಇರುತ್ತವೆ. ಔಪಚಾರಿಕ ವ್ಯವಸ್ಥೆ ಅಥವಾ ತರಗತಿ ಕೊಠಡಿಗಳಲ್ಲಿಯೂ ಕೂಡ ಮಗುವಿನ ಮನೆಮಾತು ಮತ್ತು ವಿಭಿನ್ನ ಭಾಷಿಕ ಸ್ವರೂಪಗಳನ್ನು ಒಪ್ಪಿಕೊಳ್ಳಲು ಸಮುದಾಯವು ಇನ್ನೂ ಸಿದ್ಧವಾಗಿಲ್ಲ. ತರಗತಿ ಕೊಠಡಿಯ ಪ್ರಕ್ರಿಯೆಗಳಲ್ಲಿ ಮಗುವೊಂದು ತೊಡಗಿಕೊಳ್ಳುವುದನ್ನು ಹಾಗೂ ಶಾಲಾ ವ್ಯವಸ್ಥೆಯಲ್ಲಿ ಅದರ ಧಾರಣಾ ವಿಚಾರವನ್ನು ನಿರ್ಧರಿಸುವುದರಲ್ಲಿ ಇಂತಹ ಸ್ವೀಕರಿಸುವಿಕೆಯು ಮಹತ್ತರ ಪಾತ್ರವನ್ನು ವಹಿಸುತ್ತದೆ ಎಂಬುದು ತಿಳಿದಿರುವ ಸಂಗತಿಯಾಗಿದೆ. ಈ ತರಹದಲ್ಲಿ, **ಮೇರಾ ಪನ್ನಾ**ದಂತಹ ಉಪಕ್ರಮಗಳು ಮಕ್ಕಳಿಗೆ ತುಂಬಾ ಅಗತ್ಯವಾಗಿದ್ದ ಭರವಸೆಯನ್ನು ನೀಡಬಲ್ಲವು.

'ಚಕ್‌ಮಕ್'ದ ಆರಂಭಿಕ ವರ್ಷಗಳಲ್ಲಿ ಶಿಕ್ಷಕರೂ ಕೂಡ ತಮ್ಮ ತರಗತಿಗಳಲ್ಲಿ ಪತ್ರಿಕೆಯ ಹಲವಾರು ಲೇಖನಗಳನ್ನು ಚರ್ಚಿಸುತ್ತಿದ್ದರು ಹಾಗೂ 'ಅಪ್‌ನೀ ಪ್ರಯೋಗಶಾಲಾ'ದಲ್ಲಿ ಇದ್ದಂತಹ ಕೆಲವು ಚಟುವಟಿಕೆಗಳನ್ನು ಕೈಗೊಳ್ಳಲು ಪ್ರಯತ್ನಿಸಿದರು. ಇದು ಪತ್ರಿಕೆಯನ್ನು ಒಂದು ಶೈಕ್ಷಣಿಕ ಸಾಧನವಾಗಿ ಪ್ರಸ್ತುತವಾಗಿರುವಂತೆ ಹಾಗೂ ಉಪಯುಕ್ತವಾಗಿರುವಂತೆ ನೋಡಿಕೊಳ್ಳಲು ನೆರವಾಯಿತು ಎಂಬುದಾಗಿ ಅವರು **'ಚಕ್‌ಮಕ್'**ನ ಸಂಪಾದಕೀಯ ತಂಡಕ್ಕೆ ನಿಯಮಿತವಾಗಿ ಹಿಮ್ಮಾಹಿತಿಯನ್ನು ನೀಡಿದರು. ಕಾಲಕ್ರಮೇಣ 'ಚಕ್‌ಮಕ್'ನಲ್ಲಿ ವಿಜ್ಞಾನದ ವಿಷಯಗಳು ಕಡಿಮೆಯಾದವು. ಇನ್ನೊಂದೆಡೆ ಅದರ ಓದುಗ ವರ್ಗದಲ್ಲಿಯೂ ಬದಲಾವಣೆಯಾಯಿತು. ಮೊದಲು ಹಿಂದೀ ಮಾಧ್ಯಮದ ಸರ್ಕಾರೀ ಶಾಲೆಗಳ ಮಕ್ಕಳು ಮುಖ್ಯವಾಗಿ ಇದನ್ನು ಓದುತ್ತಿದ್ದರು. ನಂತರ, ಇಂಗ್ಲೀಷ್ ಮಾಧ್ಯಮದ ಖಾಸಗೀ ಶಾಲೆಗಳ ಮಕ್ಕಳು ದೊಡ್ಡ ಸಂಖ್ಯೆಯಲ್ಲಿ ಇದನ್ನು ಓದತೊಡಗಿದರು. ಇಂದಿಗೂ **'ಚಕ್‌ಮಕ್'**ಅನ್ನು ಶಾಲೆಗಳು, ಗ್ರಂಥಾಲಯಗಳು ಹಾಗೂ ಹಲವಾರು ಸಂಘಟನೆಗಳ ಚಟುವಟಿಕೆ ಕೇಂದ್ರಗಳಲ್ಲಿ ಬಳಸಲಾಗುತ್ತಿದೆ. ಆದರೆ ಮಕ್ಕಳು ನಮಗೆ ಕಳುಹಿಸುವ ತಮ್ಮ ಬರಹಗಳು ಅಥವಾ ಚಿತ್ರಕಲೆಗಳನ್ನು ಹೊಂದಿರುವ ಸಂವಹನಾತ್ಮಕ ಅಂಕಣಗಳಿಗಷ್ಟೇ ಇದರ ಬಳಕೆ ಹೆಚ್ಚಾಗಿ ಆಗುತ್ತಿದೆ.

'ಕ್ಯೂಂವ್–ಕ್ಯೂಂವ್' ಎನ್ನುವುದು ವರುಷದ ಹಿಂದಷ್ಟೇ ಆರಂಭಿಸಿದ ಒಂದು ಅಂಕಣ. ಈ ಅಂಕಣದಲ್ಲಿ ನಾವು, ಪ್ರಶ್ನೆಗಳಿಗೆ ಪ್ರತಿಸ್ಪಂದಿಸುವಂತೆ ಮಕ್ಕಳನ್ನು ಉತ್ತೇಜಿಸುತ್ತೇವೆ. ಪ್ರಶ್ನೆಗಳ ವ್ಯಾಪ್ತಿಯು **ಯಾಕೆ ಹೂಸು ಬಿಡುತ್ತೇವೆ** ಎನ್ನುವುದರಿಂದ ಹಿಡಿದು ಯಾವುದನ್ನು ಕೆಲಸವೆಂದು ಪರಿಗಣಿಸಲಾಗುತ್ತದೆ ಹಾಗೂ ತಮ್ಮ ಕುಟುಂಬಗಳಲ್ಲಿ ಯಾರ್ಯಾರಿಗೆ ಅವರ ಮಾಡುವ ಕೆಲಸಕ್ಕೆಂದು ಸಂಬಳ ನೀಡತಕ್ಕದ್ದು ಎನ್ನುವುದರ ಕುರಿತಂತೆ ಅವರ ಅಭಿಪ್ರಾಯವೇನು ಎನ್ನುವುದರವರೆಗೆ ಇರುತ್ತದೆ. ನಿಂತಿರುವ ಒಂದು ಸೈಕಲ್ ಏಕೆ ಬೀಳುತ್ತದೆ? ತಮ್ಮ ಕುಟುಂಬದಲ್ಲಿ ಯಾರು ಅತ್ಯಂತ ಹೆಚ್ಚು ಸ್ವಾತಂತ್ರ್ಯವನ್ನು ಹೊಂದಿದ್ದಾರೆ ಎಂದು ಅವರು ಭಾವಿಸುತ್ತಾರೆ? ಯಾರನ್ನಾದರೂ ಮಾಯವಾಗಿಸುವುದು ಅವರಿಗೆ ಸಾಧ್ಯವಾಗಿದ್ದರೆ, ಅವರು ಯಾರನ್ನು ಆಯ್ದುಕೊಳ್ಳುತ್ತಾರೆ ಮತ್ತು ಏಕೆ? ಎನ್ನುವಂತಹ ಪ್ರಶ್ನೆಗಳೂ ಇರುತ್ತವೆ. ಇಂತಹ ಪ್ರಶ್ನೆಗಳು ಮಕ್ಕಳನ್ನು ತಮ್ಮ ಸುತ್ತಲಿನ ಆಗುಹೋಗುಗಳನ್ನು ಗಮನಿಸುವಂತೆ, ಆ ಕುರಿತು ಆಲೋಚಿಸುವಂತೆ ಹಾಗೂ ವಿಭಿನ್ನ ದೃಷ್ಟಿಕೋನವನ್ನು ಬಳಸಿ ಅವರು ಉತ್ತರವನ್ನು ಕಂಡುಕೊಳ್ಳಲು ಸಾಧ್ಯವಾಗುವಂತೆ ಮಾಡುತ್ತವೆ. ಬಹಳಷ್ಟು ವೈಜ್ಞಾನಿಕ ಮತ್ತು ತಾತ್ತ್ವಿಕ ಶೋಧನೆಗಳ ಆರಂಭಿಕ ಚಾಲನೆಗೆ ಕಾರಣವಾಗುವುದು ಇದೇ.

ಮಕ್ಕಳು ಹೊರಾಂಗಣಕ್ಕೆ ಹೋಗಿ, ಸುತ್ತಲಿನ ಆಗುಹೋಗುಗಳನ್ನು ಗಮನಿಸಿ, ತಮ್ಮ ನೈಸರ್ಗಿಕ ಪರಿಸರದೊಡನೆ ಸಂಪರ್ಕ–ಸಂಬಂಧವನ್ನು ಹೊಂದುವ ನಿಟ್ಟಿನಲ್ಲಿ ಅವರಿಗೆ ಉತ್ತೇಜನ ನೀಡುವ ನೇಚರ್ ಕನ್ಸರ್ವೇಷನ್ ಫೌಂಡೇಷನ್ ಅಭಿವೃದ್ಧಿಪಡಿಸಿದ ಅಂಕಣವೂ ಈ ಪತ್ರಿಕೆಯಲ್ಲಿದೆ. ಪ್ರಾಣಿ ಅಥವಾ ಸಸ್ಯಸಮೂಹಗಳ (ಕೋತಿ, ಬಿದಿರು ಇತ್ಯಾದಿ) ಮೇಲೆ ಹಾಗೂ ಪರಿಕಲ್ಪನೆಗಳ (ಸ್ವರಾನುಕರಣೆ, ನಮ್ಮ ಸುತ್ತಮುತ್ತಲಿನ ಶಬ್ದಗಳು) ಮೇಲೆ ಕೇಂದ್ರೀ–ಕೃತವಾಗಿರುವ ವಿಷಯಗಳು ಇರುತ್ತವೆ. ಇವುಗಳಿಗೆ ಪ್ರತಿ–ಸ್ಪಂದನೆಗಳು ಸೀಮಿತವಾಗಿಯೇ ಇರುತ್ತವೆ. ತಮ್ಮ ವಿದ್ಯಾರ್ಥಿಗಳು ಪ್ರಕೃತಿಯೊಂದಿಗೆ ಉತ್ತಮ ಸಂಬಂಧವನ್ನು ಬೆಳೆಸಿಕೊಳ್ಳಲು ನೆರವಾಗುವ ಹಾಗೆ ಶಾಲೆಗಳು ಹೆಚ್ಚಿನ ಚಟುವಟಿಕೆಗಳನ್ನು ಕೈಗೊಳ್ಳುವಂತೆ ನಾವು ಶಾಲೆಗಳೊಂದಿಗೆ ಕೆಲಸ ಮಾಡಬೇಕಾದ ಅಗತ್ಯವನ್ನು ಇದು ಸೂಚಿಸುತ್ತದೆ.

ಒಟ್ಟಾರೆಯಾಗಿ, ಚಕ್‌ಮಕ್‌ನಲ್ಲಿರುವ ವಸ್ತುವಿಷಯಗಳು ತಮ್ಮ ಓದುಗರಿಗೆ ಇಂದಿನ ಪ್ರಪಂಚದ ಒಳಹೊಕ್ಕು ನೋಡಲು ಬೇಕಾದ ಒಂದು ಕನ್ನಡಿಯಂತೆ ಕೆಲಸ ಮಾಡುತ್ತಿವೆ. ಅದೇ ವೇಳೆಗೆ, ನಮ್ಮಂತಹ ವಯಸ್ಕರಿಗೆ ಮಕ್ಕಳ ಲೋಕದೊಳಗೆ ಇಣುಕಿ ನೋಡಲು, ಅವರು ಯಾವುದರ ಬಗ್ಗೆ ಆಲೋಚಿಸುತ್ತಿದ್ದಾರೆ ಎನ್ನುವುದನ್ನು ತಿಳಿಯಲು, ಅವರಿಗೆ ಕಿರಿಕಿರಿ, ಬೇಸರ, ನೋವನ್ನುಂಟುಮಾಡುವುದು ಯಾವುದು, ಅವರು ತಮ್ಮ ಸುತ್ತಲಿನ ಜಗತ್ತನ್ನು ಹೇಗೆ ನೋಡುತ್ತಾರೆ ಎನ್ನುವುದನ್ನು ಅರಿತುಕೊಳ್ಳಲು ಖಂಡಿತವಾಗಿಯೂ ಇದು ಒಂದು ಬೆಳಕಿಂಡಿಯಾಗಿದೆ.

ಒಂದು ಸಾಧನವಾಗಿ ಅಥವಾ ಕಲಿಕೆಯ ಮೂಲವಾಗಿ, **'ಚಕ್‌ಮಕ್'**ನಂತಹವೂ ಸೇರಿದಂತೆ ಮಕ್ಕಳ ಪತ್ರಿಕೆಗಳ ಸಾಮರ್ಥ್ಯವು ಅಗಾಧವಾದದ್ದು. ಬೋಧನಾಕ್ರಮಕ್ಕೆ ಬೆಂಬಲವಾಗಿ ಅನೇಕ ಸಾಧನಗಳಿದ್ದರೂ, ಅವು ಹೆಚ್ಚು ಬಳಕೆಯಾಗಿಲ್ಲ. ಹಾಗೆ ಕಡಿಮೆ ಬಳಕೆಗೊಳಗಾದ ಸಾಧನಗಳಲ್ಲಿ ಮಕ್ಕಳ ಪತ್ರಿಕೆಗಳೂ ಸೇರಿವೆ. ಸಾಂಪ್ರದಾಯಿಕ ತರಗತಿ ಕೊಠಡಿಗಳಲ್ಲಿ ಜಾಗ ಪಡೆಯದ ಚಲನಚಿತ್ರಗಳು, ಸಿನಿಮಾ ಭಿತ್ತಿಚಿತ್ರಗಳು ಹಾಗೂ ಜಾಹೀರಾತುಗಳಂಥ ಇತರ ಅಸಾಂಪ್ರದಾಯಿಕ ಸಾಧನಗಳು ನಿಸ್ಸಂದೇಹವಾಗಿಯೂ ಇವೆ. ಇಂದು, ಹಲವಾರು ತರಹದ ಕಲಿಕಾ ಸಾಮಗ್ರಿಗಳ ಅಗತ್ಯವಿರುವುದನ್ನು ಹಾಗೂ ಅವುಗಳನ್ನು ಬೆಂಬಲಿಸುವ ಕುರಿತು ನಾವು ಚರ್ಚಿಸುತ್ತಿದ್ದೇವೆ. ವಿದ್ಯಾರ್ಥಿಗಳ ಕಲಿಕೆಯ ರೀತಿ ಹಾಗೂ ಅವರ ಆದ್ಯತೆಗಳಲ್ಲಿರುವ ವೈವಿಧ್ಯವನ್ನು ಒಪ್ಪಿಕೊಳ್ಳುತ್ತಿದ್ದೇವೆ. ಅಂದಾಗ, ಪತ್ರಿಕೆಗಳನ್ನು ಹಾಗೂ ಇಂಥ ಇನ್ನಿತರ ಸ್ವರೂಪಗಳೆಲ್ಲವನ್ನೂ ನಾವು ಬಳಸುವ ಬೋಧನಾಕ್ರಮದ ಸಾಧನಗಳ ಸಂಚಯಕ್ಕೆ ಸೇರಿಸಿ ಬಳಸಬೇಕಿದೆ.

ಈ ಲೇಖನವನ್ನು ಬರೆಯುವಾಗ ಉಪಯೋಗಿಸಿದ ಪರಾಮರ್ಶನ ಕೃತಿಗಳ ಪಟ್ಟಿಗೆ ruchi.shevade@gmail.com ಸಂಪರ್ಕಿಸಿ.



ವಿನತಾ ವಿಶ್ವನಾಥನ್ ಅವರು ‘ಚಕ್‌ಮಕ್’ನ ಸಂಪಾದಕರು. ಪರಿಸರ ತಜ್ಞೆಯಾಗಿ ತರಬೇತಿ ಪಡೆದ ಇವರು ಸಂಶೋಧಕಿ, ಶಿಕ್ಷಕಿ ಹಾಗೂ ವಿಜ್ಞಾನ ಬರಹಗಾರ್ತಿಯಾಗಿ ಕೆಲಸ ಮಾಡಿದ್ದಾರೆ. ಅವರನ್ನು vvinatha@gmail.com ಮೂಲಕ ಸಂಪರ್ಕಿಸಬಹುದು.



ರುಚಿ ಶೇವಡೆ ಅವರು ಭೋಪಾಲ್‌ನ ಏಕಲವ್ಯ ಫೌಂಡೇಷನ್‌ನ ಪ್ರಕಾಶನ ತಂಡದೊಂದಿಗೆ ಕೆಲಸ ಮಾಡುತ್ತಾರೆ. ಇವರು ಬೆಂಗಳೂರಿನ ಆಜೀಂ ಪ್ರೇಮ್‌ಜಿ ವಿಶ್ವವಿದ್ಯಾನಿಲಯದಿಂದ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಯನ್ನು (M.A in Education) ಪಡೆದಿರುತ್ತಾರೆ. ಇವರನ್ನು ruchi.shevade@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಸಹನಾ ಹೆಗಡೆ** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**